
# ಜಿಪುಣರಾಗಬೇಡಿ

ನಾವು ಕಷ್ಟಪಟ್ಟು ಹಣವನ್ನೋ ವಸ್ತುವನ್ನೋ ಸಂಗ್ರಹಿಸುತ್ತೇವೆ. ಇದು ನನ್ನದು ಎಂದು ಭದ್ರವಾಗಿ ಇಟ್ಟುಕೊಳ್ಳುತ್ತೇವೆ. ಆದರೆ ಯಾವ ವಸ್ತುವೂ ಶಾಶ್ವತವಾಗಿ ನಮ್ಮದಲ್ಲ. ನಾವು ದೇಹವನ್ನು ಬಿಟ್ಟುಹೋಗುವಾಗ ಯಾವುದೂ ನಮ್ಮೊಡನೆ ಬರುವುದಿಲ್ಲ.

ಒಬ್ಬ ಶ್ರೀಮಂತನಿದ್ದ. ಅವನು ತುಂಬ ಜಿಪುಣ. ಒಂದು ಕಾಸನ್ನೂ ಬಿಚ್ಚುತ್ತಿರಲಿಲ್ಲ. ತುಂಬ ಹಣವನ್ನು ಸಂಗ್ರಹಿಸಿಟ್ಟುಕೊಂಡಿದ್ದ. ಪ್ರತಿದಿನ ಹಣದ ಪೆಟ್ಟಿಗೆಯ ಬೀಗ ತೆಗೆದು, ಹಣವನ್ನು ಎಣಿಸಿ ನೋಡುತ್ತಿದ್ದ. ಅದನ್ನು ಎಣಿಸುವುದೇ ಅವನಿಗೆ ದೊಡ್ಡ ಆನಂದ.

ಅವನಿಗೆ ವಯಸ್ಸಾಯಿತು. ಅನೇಕ ರೋಗಗಳು ಅವನನ್ನು ಕಾಡತೊಡಗಿದುವು. ಇನ್ನೇನು ಅವನು ಸಾಯುವ ಸ್ಥಿತಿಯಲ್ಲಿದ್ದಾನೆ. ಸುತ್ತಲೂ ಅವನ ಮಕ್ಕಳು ಸಂಬಂಧಿಕರು ನೆರೆದಿದ್ದಾರೆ. ಅವರೆಲ್ಲ ಕಣ್ಣೀರು ಸುರಿಸುತ್ತ ಅವನು ಸಾಯುವುದನ್ನೇ ನಿರೀಕ್ಷಿಸುತ್ತಿದ್ದರು. ವೈದ್ಯರೂ ಈ ಜಿಪುಣನಿಂದ ಹಣ ದೋಚುವುದು ಅಸಾಧ್ಯವೆಂದು ತಿಳಿದು ಅವನನ್ನು ಹೆಚ್ಚು ಕಾಲ ಜೀವಿಸಿರುವಂತೆ ಮಾಡಲು ಪ್ರಯತ್ನಿಸಲಿಲ್ಲ. ಸಾಯುವುದಕ್ಕೆ ಮುಂಚೆ ಅವನ ಬಾಯಿಗೆ ಗಂಗಾಜಲವನ್ನು ಬಿಡೋಣವೆಂದು ಮಗನು ಒಂದು ಬಟ್ಟಲಿನಲ್ಲಿ ಗಂಗಾಜಲವನ್ನು ತಂದನು. ಆದರೆ ಜಿಪುಣನು ಬಾಯಿಯನ್ನು ಗಟ್ಟಿಯಾಗಿ ಮುಚ್ಚಿಕೊಂಡಿದ್ದ. ಎಷ್ಟೇ ಪ್ರಯತ್ನಪಟ್ಟರೂ ತೆರೆಯಲೇ ಇಲ್ಲ. ಅವನ ಮುಖದ ಮೇಲೆಯೇ ಗಂಗಾಜಲವನ್ನು ಚಿಮುಕಿಸಿದನು.



ಕಲೆ : ರಾಮ ಗೌತಮ

ಜಿಪುಣ ಪ್ರಾಣಬಿಟ್ಟ. ಅವನ ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅಗ್ನಿಗೆ ಆಹುತಿಯಿತ್ತರು. ಮಕ್ಕಳು ಮನೆಗೆ ಬಂದು ಪೆಟ್ಟಿಗೆಯಲ್ಲಿ ಎಷ್ಟು ಹಣ ಇದೆ ಎಂದು ನೋಡಲು ಹೊರಟರು. ಆದರೆ ಎಷ್ಟೇ ಹುಡುಕಿದರೂ ಬೀಗದಕ್ಕೆ ಸಿಗಲೇ ಇಲ್ಲ. ಮರುದಿನ ಆ ಜಿಪುಣನ ಅಸ್ಥಿಯನ್ನು ಸಂಗ್ರಹಿಸಲು ಸ್ಮಶಾನಕ್ಕೆ ಹೋದಾಗ ಬೂದಿಯ ಒಳಗೆ ಬೀಗದಕ್ಕೆ ಸಿಕ್ಕಿತು. ಆಗ ಅವರಿಗೆ ಗೊತ್ತಾಯಿತು ಆ ಮನುಷ್ಯ ಗಂಗಾಜಲವನ್ನು ಬಿಡುವಾಗ ಏಕೆ ಬಾಯಿ ತೆರೆಯಲಿಲ್ಲ ಎಂದು. ಸಂಸ್ಕೃತದಲ್ಲಿ ಒಂದು ವಿಡಂಬನಾತ್ಮಕ ಶ್ಲೋಕವಿದೆ:

**ಕೃಪಣೇನ ಸಮೋ ದಾತಾ ನ ಭೂತೋ ನ ಭವಿಷ್ಯತಿ|**
**ಅಸ್ಪೃಶನ್ ಏವ ವಿತ್ತಾನಿ ಯಃ ಪರೇಭ್ಯಃ ಪ್ರಯಚ್ಛತಿ||**

'ಜಿಪುಣನಿಗೆ ಸಮಾನನಾದ ದಾನಶೂರನು ಎಲ್ಲಿಯೂ ಯಾವ ಕಾಲದಲ್ಲಿಯೂ ದೊರೆಯನು. ತಾನು ಐಶ್ವರ್ಯವನ್ನು ಮುಟ್ಟದೆಯೇ ಇತರರಿಗೆ ಅದನ್ನು ಅವನು ನೀಡುತ್ತಾನೆ.' ■

# ಪುಸ್ತಕಪಾಂಡಿತ್ಯ ಯಾತಕ್ಕೂ ಬಾರದು.



ಕಲೆ : ರಾಮ ಗೌತಮ

ಅನೇಕ ಪುಸ್ತಕಗಳನ್ನು ಓದಿ ಪಾಂಡಿತ್ಯವನ್ನು ಪಡೆದರೆ ಯಾವ ಪ್ರಯೋಜನವೂ ಇಲ್ಲ. ನಾವು ಉತ್ತಮರಾಗುವುದು, ಉತ್ತಮ ಜೀವನ ನಡೆಸುವುದು ಮುಖ್ಯ. ಪಾಂಡಿತ್ಯ ಇದಕ್ಕೆ ಸಹಾಯ ಮಾಡಿದರೆ ಒಳ್ಳೆಯದು, ಇಲ್ಲದಿದ್ದರೆ ಅದಕ್ಕೆ ಯಾವ ಬೆಲೆಯೂ ಇಲ್ಲ. ಆಹಾರ ಪದಾರ್ಥಗಳನ್ನು ತಿನ್ನದೆ ಹಾಗೇ ಇಟ್ಟುಕೊಂಡರೆ ಏನು ಪ್ರಯೋಜನ? ಹಾಗೆಯೇ ಪಾಂಡಿತ್ಯವು ನಮ್ಮ ಬಾಳಿನ ಬೆಳವಣಿಗೆಗೆ ಸಹಾಯ ಮಾಡದಿದ್ದರೆ ಏನು ಪ್ರಯೋಜನ?

ಇಬ್ಬರು ಬ್ರಾಹ್ಮಣ ಪಂಡಿತರಿದ್ದರು. ಒಬ್ಬರು ದ್ವೈತ ಪಂಡಿತರು ಇನ್ನೊಬ್ಬರು ಅದ್ವೈತ ಪಂಡಿತರು. ಅವರವರಲ್ಲಿ ಯಾವಾಗಲೂ ವಾಗ್ವಾದ ನಡೆಯುತ್ತಿತ್ತು. ಒಮ್ಮೆ ಅವರು ಶ್ರಾದ್ಧದ ಊಟವನ್ನು ಮುಗಿಸಿಕೊಂಡು ತಮ್ಮ ಊರಕಡೆ ಹೊರಟಿದ್ದರು. ದಾರಿಯಲ್ಲಿ ಚರ್ಚೆ ಪ್ರಾರಂಭವಾಯಿತು. ಅದು ಬಿಸಿಯೇರತೊಡಗಿತು. ಅವರಿಗೆ ಕತ್ತಲೆಯಾದದ್ದು ಗೊತ್ತೇ ಆಗಲಿಲ್ಲ. ಅವರು ದಟ್ಟ ಅಡವಿಯಲ್ಲಿ ಹೋಗುತ್ತಿದ್ದಾರೆ. ಆಗ ದೂರದಲ್ಲಿ ಒಂದು ಹುಲಿ ಕಾಣಿಸಿತು. ಅವರ ಚರ್ಚೆ ಎಲ್ಲೋ ಹಾರಿಹೋಯಿತು. ಅವರು ಓಡತೊಡಗಿದರು. ಹುಲಿಯು ಅವರನ್ನು ಹಿಂಬಾಲಿಸಿತು. ಅದರಿಂದ ತಪ್ಪಿಸಿಕೊಳ್ಳಲು ಅವರು ಒಂದು ಮರವನ್ನು ಹತ್ತಿದರು. ಆ ಮರ ಅವರಿಬ್ಬರ ಭಾರವನ್ನು ಹೊರುವಷ್ಟು ದೊಡ್ಡದಾಗಿತ್ತು. ಈಗ ಹುಲಿ ಬಂದು ಅವರು ಕೆಳಗಿಳಿದು ಬರುವುದನ್ನೇ ಕಾಯುತ್ತ ಮರದ ಕೆಳಗೆ ಕುಳಿತುಕೊಂಡಿತು. ಅದು ಅಲ್ಲಿಂದ ಕದಲುವ ಸೂಚನೆ ಕಂಡುಬರಲಿಲ್ಲ. ಒಬ್ಬ ಪಂಡಿತ ಈಗೇನು ಮಾಡುವುದೆಂದು ಆಲೋಚಿಸತೊಡಗಿದ.